# ಒಂದೆ ಕೂಗಳತೆ ವೈಕುಂಠ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 137.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 406.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 150.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 13.
5. **Note:** Lyrics mentioned without highlights are as per Ref. 1. The wordings mentioned in yellow highlights are as per Ref. 2. The wordings in Ref. 3 are same as in Ref. 2.
6. **Note:** Singer has followed lyrics as in Ref. 2.

ರಾಗ: ಕಲ್ಯಾಣಿ ತಾಳ: ಅಟ

ಒಂದೇ ಕೂಗಳತೆ ಭೂ ವೈಕುಂಠ
ಸಂದೇಹವಿಲ್ಲವು ಸಾಧು ಸಜ್ಜನರಿಗೆ ॥ ಪ ॥

ಅಂಬರೀಷನು ದ್ವಾದಶೀ ವ್ರತ ಮಾಡಲು
ಡೊಂಬೆಯ ಮಾಡಿದ ದುರ್ವಾಸನು
ಕುಂಭಿನೀಪತಿ ಕೃಷ್ಣಾ ಕಾಯಬೇಕೆನುತಲೆ
ಇಂಬಿಟ್ಟು ಚಕ್ರದಿ ಮುನಿ ಶಾಪ ಕಳೆದುದು ॥ ೧ ॥

ಕರಿರಾಜ ವನದಲಿ ಉಳುಹೆಂದು ಕೂಗಲು
ತ್ವರಿತದಿಂದಲಿ ಬಂದು ಕಾಯ್ದ ತಾನು
ಕರುಣಸಾಗರ ಕೃಷ್ಣ ಕಾಯಬೇಕೆನುತಲೆ
ತರಳ ಪ್ರಹ್ಲಾದಗೆ ಕಂಬದಿ ಬಂದುದು ॥ ೨ ॥

ದ್ರುಪದ ರಾಯನ ಪುತ್ರಿಗಾಪತ್ತು ಬರಲು
ಕೃಪೆಯಿಂದಲಕ್ಷಯವಿತ್ತನು
ಕಪಟನಾಟಕ ಕೃಷ್ಣ ಪುರಂದರ ವಿಠಲನ
ಗುಪಿತದಿ ನೆನೆವರ ಹೃದಯವೇ ವೈಕುಂಠವು ॥ ೩ ॥

ರಾಗ: ಕಲ್ಯಾಣಿ ತಾಳ: ಅಟ

ಒಂದೇ ಕೂಗಳತೆ ವೈಕುಂಠ
ಸಂದೇಹವಿಲ್ಲವೋ ಸಾಧು ಸಜ್ಜನರಿಗೆ

ಸರಸಿಯಲಿ ಆನೆ ಮೊರೆಯೆಂದು ಕರೆಯಲು
ತ್ವರಿತದಿ ಬಂದು ಕಾಯ್ದಾ
ನರಹರಿ ಕೃಷ್ಣಾ ಸಲಹೆಂದು ಚೀರಲು
ತರಳ ಪ್ರಹ್ಲಾದಗೆ ಕಂಬದಿಂದಲಿ ಬಂದ

ಅಂಬರೀಷ ದ್ವಾದಶೀ ವ್ರತ ಮಾಡಲು
ದೊಂಬಿ ಮಾಡಿದ ದುರ್ವಾಸ ಮುನಿ
ಕುಂಭಿನೀಪತಿ ಕೃಷ್ಣ ಕಾಯೆಂದು ಮೊರೆಯಿಡೆ
ಬೆಂಬತ್ತಿ ಚಕ್ರದಿಂ ಮುನಿ ಶಾಪವ ಕಳೆದ

ದ್ರುಪದ ರಾಯನ ಪುತ್ರಿಯಾಪತ್ತ ಕಳೆಯೆನೆ
ಕೃಪೆಯಿಂದ ಅಕ್ಷಯವಿತ್ತ ತಾನು
ಕಪಟನಾಟಕ ಕೃಷ್ಣ ಪುರಂದರ ವಿಠಲನ
ಗುಪಿತದಿ ನೆನೆವರ ಹೃದಯವೇ ವೈಕುಂಠ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಪುರಾಣ ಕಾಲದ ಭಕ್ತರ ಉದಾಹರಣೆಗಳಿಂದ ಪರಮಾತ್ಮನ ಆವಾಸವು ಭಕ್ತನಲ್ಲಿಯೇ ಎಂಬುದನ್ನು ದಾಸರು ಸಿದ್ಧಗೊಳಿಸಿದ್ದಾರೆ.

**ಕೂಗಳತೆ –** ಕೂಗಿದರೆ ಕೇಳುವಷ್ಟು ದೂರ; 'ಎಲ್ಲಿ ಕರೆದರೆ ಅಲ್ಲೆ ಬಂದೊದಗುವ' ಎಂಬುದರ ಭಾವ.

**ಸರಸಿಯಲಿ...** – ಗಜೇಂದ್ರಮೋಕ್ಷಣದ ಪ್ರಸಂಗ.

**ನರಹರಿ ಕೃಷ್ಣಾ...** – ನರಸಿಂಹಾವತಾರ.

**ಅಂಬರೀಷ... –** ವಿಷ್ಣು ಭಕ್ತನಾದ ಅಂಬರೀಷನ ವ್ರತಭಂಗಮಾಡಲು ಬಂದ ದೂರ್ವಾಸನನ್ನು ಬೆನ್ನಟ್ಟಿ (ಬೆಂಬತ್ತಿ) ವಿಷ್ಣು ಚಕ್ರವು ಕಾಡಿದ ಪ್ರಸಂಗ.

**ಕುಂಭಿನೀಪತಿ = ಕುಂಭಿಣಿಪತಿ –** ಭೂಮಿಗೆ ಒಡೆಯನಾದವನು, ಅಂಬರೀಷರಾಜ.

**ದ್ರುಪದರಾಯನ ಪುತ್ರಿ –** ದ್ರೌಪದಿಯ ಮಾನಭಂಗಪ್ರಕರಣದಲ್ಲಿ ಅಕ್ಷಯ ವಸ್ತ್ರದಾನ ಮಾಡಿದ ಪ್ರಸಂಗ.

**ಗುಪಿತದಿ –** ಅಂತರಂಗದಲ್ಲಿ; ಧ್ಯಾನಮಾರ್ಗವನ್ನು ಹಿಡಿದು.

[ಮೊದಲ ನುಡಿಯಲ್ಲಿ ಈ ಪಾಠಾಂತರವಿದೆ

ಕರಿರಾಜ ವನದಲಿ ಉಳುಹೆಂದು ಕೂಗಲು
ತ್ವರಿತದಿಂದಲಿ ಬಂದು ಕಾಯ್ದ ತಾನು
ಕರುಣಸಾಗರ ಕೃಷ್ಣ ಕಾಯಬೇಕೆನುತಲೆ
ತರಳ ಪ್ರಹ್ಲಾದನ ಕಂಬದಿ ಬಂದುದು]

**Classification:** Keerthane
**Ankita:** purandara vittala
**Location:** NA
**Category:** Aartha Bhava, Mukti Marga,
**Sub-Category:** vaikunta, gaja, Narasimha, Krishna, prahallada, ambarisha, vrata, durvasa, muni, chakra, shapa, draupadi, Akshaya, mukti, Dhyana,
**Pravachana:** NA
**Explanation:** NA